**ಓ.ಎಸ್. ನಂಬರ್ : 64/2023**
**ಪಿ .ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 29.07.2026

**ಪಾಟೀ ಸವಾಲು : ಪ್ರತಿವಾದಿಯ ಪರವಾಗಿ ಶ್ರೀ ಹೆಚ್.ಪಿ.ಎನ್ ವಕೀಲರಿಂದ :**

ನಾನು ಈಗ ಮಡಿಕೇರಿಯಲ್ಲಿ ವಾಸವಾಗಿದ್ದೇನೆ. ಅಲ್ಲಿ ಸುಮಾರು 20 ವರ್ಷಗಳಿಂದ ವಾಸವಾಗಿರುತ್ತೇನೆ. ದಾವಾ ಆಸ್ತಿ ಸಂಬಂಧ 2004 ರಲ್ಲಿ ಪ್ರತಿವಾದಿಗೆ ಒಂದು ಕರಾರು ಪತ್ರವನ್ನು ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿ ನನ್ನ ಮೇಲೆ ಕ್ರಯ ಪತ್ರ ಬರೆದುಕೊಡಬೇಕೆಂದು ಪಕ್ಕದ ನ್ಯಾಯಾಲಯದಲ್ಲಿ ದಾವಾ ಹಾಕಿರುತ್ತಾರೆ ಅಂದರೆ ಸರಿ. ಸದರಿ ಕರಾರು ಪತ್ರದ ಆಧಾರ ಮೇಲೆ ಸ್ವಾಧೀನವನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿ ನನಗೆ ಸರ್ಕಾರದಿಂದ ನಾನು ಸೈನಿಕನಾದ್ದರಿಂದ ಮಂಜೂರು ಆಗಿರುತ್ತದೆ ಎನ್ನುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮಂಜೂರಾದ ಮೂಲ ದಾಖಲಾತಿ ಪ್ರತಿವಾದಿಯ ಬಳಿ ಇದೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಮಾಡಲು ಪ್ರತಿವಾದಿ ಇಚ್ಛಿಸಿದ್ದು ಅವರು ನೀಡುತ್ತಿದ್ದ ತೊಂದರೆಯಿಂದ ಅದನ್ನು ಅವರಿಗೆ ಮಾರಾಟ ಮಾಡಲು ಒಪ್ಪಿ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪ್ರತಿವಾದಿ ಕೇಳಿದ್ದು ನಾನು ನಕಲು ಕಾಪಿಯನ್ನು ಪಡೆಯಲು ಮೂಲ ಪ್ರತಿಯನ್ನು ಪ್ರತಿವಾದಿಗೆ

ಕೊಟ್ಟಿರುತ್ತೇನೆ ಎನ್ನುತ್ತಾರೆ. ಆನಂತರ ಮೂಲ ಪ್ರತಿಯನ್ನು ಪ್ರತಿವಾದಿ ಎಷ್ಟು ಕೇಳಿದರೂ ಕೊಟ್ಟಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ದೂರು ನೀಡಿದ್ದೀರಾ ಅಂದರೆ ಇಲ್ಲ ಎನ್ನುತ್ತಾರೆ. ಸದರಿ ಮೂಲ ಪ್ರತಿಯನ್ನು 2004 ರಲ್ಲಿ ಪ್ರತಿವಾದಿಗೆ ಕೊಟ್ಟಿರುತ್ತೇನೆ ಅಂದರೆ ಇಲ್ಲ ಎನ್ನುತ್ತಾರೆ. ಆ ಸಂಬಂಧ ಅವರು ನನಗೆ ನೋಟೀಸ್ಸು ನೀಡಿದ್ದರಿಂದ ನಾನು ಈ ದಾವಾ ಸಲ್ಲಿಸಿರುತ್್ತೇನೆ ಅಂದರೆ ನಾನು ಈ ದಾವಾ ಸಲ್ಲಿಸಿದ್ದರಿಂದ ಆ ದಾವಾವನ್ನು ಸಲ್ಲಿಸಿರುತ್ತಾರೆ ಎನ್ನುತ್ತಾರೆ. ನಿಡಿ-8 ರಿಂದ 10 ರ ದಾಖಲಾತಿಗಳಲ್ಲಿ ನನ್ನ ಹೆಸರಾಗಲೀ ಅಥವಾ ಸರ್ವೆ ನಂಬರ್ ಇಲ್ಲ ಅಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರತಿವಾದಿಗಳಿಗೆ ಕ್ರಯ ಕರಾರು ಪತ್ರವನ್ನು ಮಾಡಿಕೊಟ್ಟು ಸ್ವಾಧೀನವನ್ನು ಬಿಟ್ಟು ಕೊಟ್ಟಿದ್ದು ಈ ದಾವಾವನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿಯನ್ನು ಹೇಳುತ್ತೀರಾ ಅಂದರೆ ಪೂರ್ವಕ್ಕೆ ನನಗೆ ಗೊತ್ತಿಲ್ಲ, ಪಶ್ಚಿಮಕ್ಕೆ ಪ್ರಕಾಶ್, ಉತ್ತರಕ್ಕೆ ಜಾನಕಿ ಕಾಳಪ್ಪ ಕಾನ್ವೆಂಟ್, ದಕ್ಷಿಣಕ್ಕೆ ನನ್ನ ಸಹೋದರನ ಆಸ್ತಿ ಇದೆ ಎನ್ನುತ್ತಾರೆ. 2023 ರಲ್ಲಿ ಪ್ರತಿವಾದಿ ನನಗೆ ತೊಂದರೆ ಕೊಟ್ಟಿದ್ದರು ಎನ್ನುವುದಕ್ಕೆ ದೂರು ದಾಖಲು ಮಾಡಿದ್ದೀರಾ ಅಂದರೆ ಹೌದು ಎನ್ನುತ್ತಾರೆ. ನಾನು 2004 ರಿಂದ 2023 ರವರೆಗೆ ನಾನು ಸ್ವಾಧೀನದಲ್ಲಿ ಇದ್ದೆ ಎನ್ನುವುದಕ್ಕೆ ಯಾವುದಾದರೂ ದಾಖಲಾತಿ ಇದೆಯಾ ಅಂದರೆ ತೆರಿಗೆ ಪಾವತಿ ರಶೀದಿ ಇದೆ ಎನ್ನುತ್ತಾರೆ. ನಾನು ಪ್ರತಿವಾದಿಗೆ 2004 ರಲ್ಲಿಯೇ ಸ್ವಾಧೀನಕ್ಕೆ ಬಿಟ್ಟು ಕೊಟ್ಟಿದ್ದು ಅದು ನನ್ನ ಸ್ವಾಧೀನದಲ್ಲಿ ಇಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
***ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,***
***ಸೋಮವಾರಪೇಟೆ.***